**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 39/2013</u>**

ದಿನಾಂಕಃ 04.09.2021
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 3 ಪ್ರಾಸಾ - 9

| | | |
|---|---|---|
| ಹೆಸರು | ಃ | ಗಂಗಪ್ಪ |
| ತಂದೆಯ/ಗಂಡನ ಹೆಸರು | ಃ | ಬೈಲಪ್ಪ |
| ವಯಸ್ಸು | ಃ | 55 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಗೊಲ್ಲರದೊಡ್ಡಿ |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನನಗೆ ಮೃತೆ ಸುಕನ್ಯ ಗೊತ್ತಿರುತ್ತಾರೆ. ಸುಮಾರು 15 ವರ್ಷಗಳ ಹಿಂದೆ ಮೃತಳನ್ನು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಗೆ ಮದುವೆ ಮಾಡಿ ನೀಡಲಾಗಿತ್ತು. ಸುಕನ್ಯ ಮದುವೆಯ ನಂತರ ತನ್ನ ಗಂಡನ ಮನೆಯಲ್ಲಿ ತನ್ನ ಅತ್ತೆ ಮಾವನ ಜೊತೆ ವಾಸವಾಗಿದ್ದಳು.

2. ಸುಕನ್ಯಳ ವೈವಾಹಿಕ ಜೀವನದಲ್ಲಿ ಒಂದು ಮಗು ಜನಿಸಿರುತ್ತದೆ. ಸುಕನ್ಯಳ ತಂದೆ-ತಾಯಿಗಳು ಸದರಿ ಮಗುವನ್ನು ಪ್ರಸ್ತುತ ಪೋಷಣೆ ಮಾಡುತ್ತಿದ್ದಾರೆ.

3. ಮದುವೆಯ ಮಾತುಕತೆಗಳು ಮದುವೆಯ ನಿಕಟಪೂರ್ವ 15 ದಿನಗಳಲ್ಲಿ ಜರುಗಿದೆ. ಹುಡುಗನ ಮನೆಯವರು ಯಾವುದೇ ಬೇಡಿಕೆ

ಸಲ್ಲಿಸಿರುವುದಿಲ್ಲ. ಆದರೆ ಹುಡುಗಿ ಕಡೆಯವರು ಓಲೆ ಜುಮುಕಿ ಸರ ನೀಡಿರುತ್ತಾರೆ. ಬೇರೆ ಏನನ್ನೂ ನೀಡಿರುವುದಿಲ್ಲ.

4. ಮದುವೆಯ ನಂತರ 3 ವರ್ಷಗಳ ಕಾಲ ಅನ್ಯೋನ್ಯ ಜೀವನ ನಡೆಸಿರುತ್ತಾರೆ. 3 ವರ್ಷಗಳ ನಂತರ ಮಗುವಿನ ಆರೋಗ್ಯದ ತೊಂದರೆಯಿಂದ ಬೆಂಗಳೂರಿನಲ್ಲಿ ಮನೆ ಮಾಡಲು ಸುಕನ್ಯ ಕೇಳಿರುತ್ತಾಳೆ. ಬೇರೆ ಇತರೆ ಯಾವುದೇ ತೊಂದರೆಗಳನ್ನು ನನ್ನ ಬಳಿ ಸುಕನ್ಯ ಹೇಳಿರುವುದಿಲ್ಲ. ಸುಕನ್ಯಳ ತಂದೆ ಯಾವುದೇ ಕ್ರಮ ಕೈಗೊಂಡಿಲ್ಲ. ನಾನು ಮನೆ ಮಾಡಲು ಆರೋಪಿಗೆ ಸೂಚಿಸಿದ್ದೆನು. ಆದರೆ ಸುಕನ್ಯಳ ನಿಧನದ ನಿಕಟಪೂರ್ವದಲ್ಲಿ ಆಕೆ ಪ್ರಶ್ನಿಸಿದಂತೆ ಏನನ್ನೂ ನನ್ನ ಬಳಿ ಹೇಳಿಕೊಂಡಿಲ್ಲ.

5. ಸುಕನ್ಯಳು ತೀರಿಕೊಂಡು ಈಗಾಗಲೇ 3 ವರ್ಷಗಳಾಗಿದ್ದು ಆಕೆ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆಕೆಯ ಶವದ ಮೇಲೆ ಏನೂ ಆಗಿರಲಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಪ್ರತ್ಯೇಕ ಮನೆ ಬೇಡಿಕೆ ಈಡೇರಲಿಲ್ಲ ಎಂಬ ಕಾರಣಕ್ಕೆ ಸುಕನ್ಯ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ, ಪರಿಶೀಲಿಸಿದೆ. ಈ ಸಾಕ್ಷಿಯ ಸಾಕ್ಷ್ಯವು ತನಿಖಾಧಿಕಾರಿ ಸಂಗ್ರಹಿಸಿದ ಸಾಕ್ಷ್ಯಕ್ಕೆ ವಿರುದ್ಧವಾಗಿ ಕಂಡುಬಂದಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವುದು ನ್ಯಾಯಸಮ್ಮತವಾಗಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

<u>**ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ**</u>

6. ನಗದು ಹಣ, ಚಿನ್ನ ಇವುಗಳನ್ನು ನೀಡಬೇಕೆಂದು ಮದುವೆಯ ನಿಕಟಪೂರ್ವದಲ್ಲಿ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಮದುವೆಯ ನಂತರ ಸುಕನ್ಯ ಮದುವೆಯ ನಿಕಟಪೂರ್ವದಲ್ಲಿ ಒಪ್ಪಿದಂತೆ ಹಣ, ಚಿನ್ನ ಇತ್ಯಾದಿಗಳನ್ನು ತಂದಿಲ್ಲ ಎಂಬ ಕಾರಣಕ್ಕೆ ಆರೋಪಿ ತಕರಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸುಕನ್ಯಳ ನಿಧನದ ನಿಕಟಪೂರ್ವದಲ್ಲಿ ಹಣ ತರಲೆಂದು ಸುಕನ್ಯಳಿಗೆ ಹಲ್ಲೆ ಮಾಡಿ ಆರೋಪಿ ಕಳುಹಿಸಿರುತ್ತಾರೆ ಮತ್ತು ಈ ಬಗ್ಗೆ ಪಂಚಾಯಿತಿ ಜರುಗಿದ್ದು ನಾನು ಸಹ ಪಂಚಾಯಿತಿಯಲ್ಲಿ ಭಾಗಿಯಾಗಿದ್ದೆನು ಎಂದರೆ ಸರಿಯಲ್ಲ. ಪೊಲೀಸರಿಗೆ ಸೂಚಿಸಿದ ಸಂಗತಿಗಳನ್ನು ಮತ್ತು ನನಗೆ ಓದಿ ಹೇಳಿದ ಇತರ ಸಂಗತಿಗಳನ್ನು ನಮೂದಿಸಿ ಈಗ ನನಗೆ ಓದಿ ಹೇಳಿದ ದಾಖಲೆಯಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿದ ದಾಖಲೆಯನ್ನು ಈಗ ನಿಶಾನೆ ಪಿ 21 ಎಂದು ಗುರುತಿಸಲಾಯಿತು.

7. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ</u> ಶ್ರೀ.ಬಿ.ಆರ್. ವಕೀಲರಿಂದ – ಆರೋಪಿಗಳ ಪರವಾಗಿಃ- ಇರುವುದಿಲ್ಲ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.